# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: **ಸ್ವಾಮಿ ಶ್ರದ್ಧಾನಂದ**


ಅನುವಾದ: **ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೪೩

ಮತ್ತೊಂದೆಡೆ, ಅವರಿಂದ ದೀಕ್ಷೆ ಪಡೆದ ಕೆಲವು ಹುಡುಗಿಯರು ತಮ್ಮದೇ ಪ್ರಯತ್ನದಿಂದ ಮಹಿಳಾ ಆಶ್ರಮವೊಂದನ್ನು ಕಟ್ಟಲಾರಂಭಿಸಿದರು. ಆಗ ಅವರು ಶ್ರೀಗುರುವಿನಿಂದ ಆಶ್ವಾಸನೆಯನ್ನೂ, ಉತ್ಸಾಹ, ಆಶೀರ್ವಾದಗಳನ್ನೂ ಪಡೆದಿದ್ದರು. ಈ ಆಶ್ರಮದಿಂದಲೇ ಕೆಲವರು ೧೯೫೦ರಲ್ಲಿ ತ್ಯಾಗ, ಸೇವೆಯ ವ್ರತಾನುಸಾರ ನಿವೇದಿತಾ ಬಾಲಕಿಯರ ವಿದ್ಯಾಲಯಕ್ಕೆ ಸೇರಲು ಸಂಕಲ್ಪಿಸಿದ್ದರು. ವಿರಜಾನಂದರಾಗ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ಆಗಿನ ಕಾರ್ಯದರ್ಶಿಗಳಾಗಿದ್ದ ಸ್ವಾಮಿ ವೀರೇಶ್ವರಾನಂದರು ಮಹಾರಾಜರಲ್ಲಿ ಈ ವಿಷಯವನ್ನು ಅರಿಕೆ ಮಾಡಿಕೊಂಡಾಗ ಅವರು ತಮ್ಮ ಅಗಾಧ ಆನಂದವನ್ನು ವ್ಯಕ್ತಪಡಿಸಿ ವ್ರತಧಾರಿಣಿಯರಿಗೆ ಆಶೀರ್ವಾದವನ್ನೂ ಸಹ ನೀಡಿದ್ದರು.

### ೨೨

ಅಸ್ಸಾಂ ಮತ್ತು ಪೂರ್ವಬಂಗಾಳದ ಪ್ರವಾಸ ಮುಗಿಸಿ ವಿರಜಾನಂದರು ಈಗ ಮಠಕ್ಕೆ ಹಿಂತಿರುಗಿದ್ದಾರೆ. ೧೯೪೫ರ ಜನವರಿಯ ಕೊನೆಯ ಭಾಗ. ಸ್ವಾಮಿ ಧ್ರುವೇಶ್ವರಾನಂದರು ಕಾಶೀ ಸೇವಾಶ್ರಮದಲ್ಲಿ ಪಾರ್ಶ್ವವಾಯುವಿಗೆ ತುತ್ತಾಗಿ ತಮ್ಮ ೫೫ನೇ ವರ್ಷದಲ್ಲಿ ದೇಹತ್ಯಾಗ ಮಾಡಿದರೆಂಬ ಸಮಾಚಾರ ತಿಳಿದುಬಂತು. ಇವರು ೧೯೧೪ರಲ್ಲಿ ಮಾಯಾವತಿಯಲ್ಲಿ ಮಠವನ್ನು ಸೇರಿದ್ದರು. ಇವರ ಸಾಧು ಸ್ವಭಾವ ಮತ್ತು ಪ್ರಾಮಾಣಿಕ ವ್ಯವಹಾರದಿಂದಾಗಿ ಎಲ್ಲರೂ ಪ್ರಭಾವಿತರಾಗಿದ್ದರು.



ತಾಮಲೂಕ್ ನಗರವನ್ನು ಕೇಂದ್ರವಾಗಿರಿಸಿಕೊಂಡು ಇಡೀ ಮೇದಿನಿಪುರದಿಂದ ಮಹಾರಾಜರಿಗೆ ಆಹ್ವಾನ ಬಂದಿದೆ. ಆರೋಗ್ಯದ ದೃಷ್ಟಿಯಿಂದ ನೋಡಿದರೆ ಆಹ್ವಾನವನ್ನು ನಿರಾಕರಿಸುವುದೇ ಉಚಿತ. ಆದರೆ ಹಾಗೆ ಮಾಡಲಿಲ್ಲ. ನೆರೆ, ದುರ್ಭಿಕ್ಷದ ಆಕ್ರಮಣಕ್ಕೆ ಒಳಗಾಗಿ, ವಿದೇಶೀ ಸರ್ಕಾರದ ದಬ್ಬಾಳಿಕೆಯಿಂದ ಕನಲಿ ಅರೆಜೀವವಾದ ಮೇದಿನೀಪುರದವರ ಬಗ್ಗೆ ಮಹಾರಾಜರ ಮಮತೆ ಉಕ್ಕಿತು. ಪಾಂಶ್‌ಕುಡಾ ಎಂಬ ನಿಲ್ದಾಣದಲ್ಲಿ ಸಂಜೆ ವೇಳೆ ಇನ್ನೂರು ಗ್ರಾಮವಾಸಿಗಳು ಶಂಖವನ್ನೂದಿ ಈ ಸಂನ್ಯಾಸಿ ಅತಿಥಿಗಳಿಗೆ ಸ್ವಾಗತವನ್ನು ಕೋರಿದರು. ಅವರ ಮೇಲ್ವಸ್ತ್ರಗಳು ಛಿದ್ರಗೊಂಡಿದ್ದವು. ಮೈಮೇಲೆ ಬನಿಯನ್ ಅಥವಾ ಚೌಕವು ಕೆಲವರಿಗಿದ್ದರೆ, ಕೆಲವರಿಗೆ ಅದೂ ಇರಲಿಲ್ಲ. ಆದರೆ ಕಣ್ಣುಗಳಲ್ಲಿ ಜೀವನ ಸಂಗ್ರಾಮದಿಂದ ಹಿಮ್ಮೆಟ್ಟದ ದೃಢತೆಯಿತ್ತು. ಅಮಾನುಷ ಕಿರುಕುಳ ಮತ್ತು ಶೋಷಣೆಗಳು ಅವರ ಆತ್ಮಸ್ಥೈರ್ಯವನ್ನು ಕುಂದಿಸಿರಲಿಲ್ಲ. ವಿರಜಾನಂದರಿಳಿದ ರೈಲಿನಲ್ಲೇ ಬಿಳಿ ಸೈನಿಕರ ಒಂದು ಗುಂಪು ಅಟ್ಟಹಾಸ ಅಬ್ಬರಗಳಿಂದ ಪಯಣಿಸುತ್ತಿತ್ತು. ಅವರೆಲ್ಲರೂ ಮಾಸಿದ ಬಟ್ಟೆಯನ್ನುಟ್ಟಿದ್ದ ಜನತೆಯನ್ನು ಕಂಡು ಗೇಲಿಮಾಡಿ ಹೋದರು. ಅಯ್ಯೋ ಮದೋನ್ಮತ್ತ ಬಲೋದ್ಧತ ಬರ್ಬರ ದಂಭವೇ, ಅಪಮಾನಗೊಳಿಸಿ ಭಾರತದ ಆತ್ಮಕ್ಕೆ ನೀನಿತ್ತ ಪೀಡೆಯಾದರೂ ಅದೆಷ್ಟು! ಕೊನೆಗೂ ನಿನಗೆ ಗೆಲ್ಲಲು ಸಾಧ್ಯವಾಯಿತೇನು?

ತೆಂಗಿನ ಮರದ ನೆರಳಿನಲ್ಲಿ ಹರಡಿರುವ ಚಿಕ್ಕ ತಾಮಲೂಕ್ ನಗರವು ಬಹು ಶತಮಾನಗಳ ಇತಿಹಾಸವನ್ನು ತನ್ನ ವಕ್ಷದಲ್ಲಿರಿಸಿಕೊಂಡಿದೆ. ವಿರಜಾನಂದರು ಇಲ್ಲಿಯ ಆಶ್ರಮದಲ್ಲಿ ಏಳು ದಿನಗಳಿದ್ದರು. ಮೇದಿನೀಪುರ ಜಿಲ್ಲೆಯ ಬೇರೆ ಬೇರೆ ಸ್ಥಳಗಳಿಂದ ಬಂದ ಭಕ್ತರು ಮತ್ತು ಸಾಧುಗಳಿಂದ ಇಲ್ಲಿಯ ಆಶ್ರಮವು ಸಂಭ್ರಮಿಸಿತು. ಮಹಾರಾಜರು ಇಲ್ಲಿಯ ಪುಣ್ಯಪೀಠವಾದ ದೇವಿ ಬರ್ಗಭೀಮಾ ಮಂದಿರಕ್ಕೆ ಒಂದು ದಿನ ಹೋಗಿ ದರ್ಶನ ಪಡೆದು ಬಂದರು. ತಾಮಲೂಕಿನಿಂದ ಕೊಲ್ಕತ್ತಾಕ್ಕೆ ಸ್ಟೀಮರಿನಲ್ಲಿ ಹಿಂತಿರುಗಿದರು.

ಬೇಲೂರು ಮಠದ ಹಳೆಯ ಕಟ್ಟಡ ಪೂರ್ವದಿಕ್ಕಿನ ಮೈದಾನದ ಗಂಗಾತೀರದಲ್ಲಿ ಒಂದು ದಿನ (೨೫ನೇ ಮಾರ್ಚ್ ೧೯೪೫) ಭಾಗವತ ಪಾಠವು ನಡೆಯುತ್ತಲಿದೆ. ಭಾಗವತರು ಪಂಡಿತ ರಾಮನಾರಾಯಣ ತರ್ಕತೀರ್ಥರು, ದಿನಾಜ್‌ಪುರದ ಮಹಾರಾಜನ ಸಭಾಪಂಡಿತರೂ ಸಹ. ವಿರಜಾನಂದರೂ ಬಂದು ಕುಳಿತಿದ್ದಾರೆ. ಅವರು ದಿನಾಜ್‌ಪುರಕ್ಕೆ ಹೋಗಿದ್ದಾಗಲೇ ಈ ಪಂಡಿತರೊಂದಿಗೆ ಭೇಟಿಯಾಗಿತ್ತು. ಪಂಡಿತರು ಮಹಾರಾಜರನ್ನು ಒಂದು ದಿನ ತಮ್ಮ ಮನೆಗೂ ಕರೆದೊಯ್ದಿದ್ದರು. ತುಂಬ ನಿಷ್ಠಾವಂತ ಬ್ರಾಹ್ಮಣರು; ಮನೆಯಲ್ಲಿ ದಧಿವಾಮನ್‌ಜೀ ದೇವರ ಸೇವೆ ನಡೆಯುತ್ತಿತ್ತು. ಈತನ ಹಿರಿಯ ಮಗನು ಮಠವನ್ನು ಸೇರಿದ್ದನು.[೧] ಮೊದಮೊದಲು ತರ್ಕತೀರ್ಥರು ಸನಾತನ ಪಂಥದ ಮತಾಂಧ ಪಂಡಿತರಂತೆ ಶ್ರೀರಾಮಕೃಷ್ಣ ವಿವೇಕಾನಂದರ ಭಾವಾದರ್ಶಕ್ಕೆ ಪ್ರಾಮುಖ್ಯ ನೀಡುತ್ತಿರಲಿಲ್ಲ. ಮುಂದೆ 'ಶ್ರೀರಾಮಕೃಷ್ಣ ಕಥಾಮೃತ'ವನ್ನು ಆಳವಾಗಿ ಅಭ್ಯಸಿಸಿ ಅವರಿಗೊಂದು ಹೊಸ ದೃಷ್ಟಿಯೇ ಬಂದಿತು. ಅನಂತರ 'ಶ್ರೀಮದ್ಭಾಗವತ' ವನ್ನು ವಿವರಿಸುವಾಗಲೆಲ್ಲ ಶ್ರೀರಾಮಕೃಷ್ಣರ ಜೀವನ ಮತ್ತು ಉಪದೇಶದ ಬೆಳಕಿನಲ್ಲೇ ವ್ಯಾಖ್ಯಾನಿಸುತ್ತಿದ್ದರು. ವಿರಜಾ ನಂದರು ಈ ಪಂಡಿತರಿಗೆ ಒಂದು ಊರುಗೋಲನ್ನು ಕೊಟ್ಟಿದ್ದರು. 'ಈ ಕೋಲೇ ನನಗೆ ದಾರಿಯನ್ನು ತೋರಿ ಕರೆದುಕೊಂಡು ಹೋಗುತ್ತದೆ' ಎನ್ನುತ್ತಿದ್ದರು ಅವರು. ಇಂತಹ ಪಂಡಿತ ಮಹಾ ಶಯರ ಭಾಗವತ ಪಾಠವನ್ನು ಅಂದು ಕೇಳಿ ಮಹಾರಾಜರು ಸಂಪ್ರೀತರಾದರು.

ಶ್ರೀರಾಮಕೃಷ್ಣ ಮಿಷನ್ನಿನ ವಾರ್ಷಿಕ ಸಭೆಯು (೩೦.೩.೪೫) ಮುಗಿದ ಎರಡು ವಾರಗಳ ನಂತರ ಮಹಾರಾಜರು ಶ್ಯಾಮಲಾತಾಲ್‌ಗೆ ಹೊರಟರು. ಪಾಟ್ನಾದಲ್ಲಿ ಕೆಲವು ದಿನಗಳಿಗೆಂದು ಉಳಿದಿದ್ದರು. ಅಲ್ಲಿ ಶ್ರೀರಾಮಕೃಷ್ಣ ಮಂದಿರಕ್ಕೆ ಶಂಕುಸ್ಥಾಪನೆಯನ್ನು ನೆರವೇರಿಸಿದ್ದರು. ಶ್ಯಾಮಲಾತಾಲ್ ತಲುಪಿದ ಸ್ವಲ್ಪ ಕಾಲದಲ್ಲಿಯೇ ಮಹಾರಾಜರ ಕಾಲು ನೀರು ತುಂಬಿ ಊದಿತ್ತು. ವೈದ್ಯರಾದ ಇಂದು ಬಾಬುಗಳು ರೋಗ ಲಕ್ಷಣವನ್ನು ಕೇಳಿ ತಿಳಿದು ಹೊಸ ಔಷಧಗಳನ್ನು ಕಳುಹಿಸಿದ್ದರು. ರೋಗದ ಉಪಶಮನವಾಗದಿದ್ದರೆ ಮಹಾರಾಜರು ಕೆಳಗಿಳಿದು ಮೈದಾನ ಪ್ರದೇಶಕ್ಕೆ ಬರಬೇಕಾಗುತ್ತದೆ ಎಂದು ಸಹ ತಿಳಿಸಿದ್ದರು.

ಕಾಶಿಯ ಪತ್ರವೊಂದರಿಂದ ತಿಳಿದುಬಂತು, ಮಠದ ಹಿರಿಯ ಸಂನ್ಯಾಸಿಗಳಾದ ಸ್ವಾಮಿ ಮಹಿಮಾನಂದರು ತಮ್ಮ ೮೨ನೇ ವಯಸ್ಸಿನಲ್ಲಿ ಶರೀರತ್ಯಾಗ ಮಾಡಿದ್ದಾರೆ ಎಂದು. ಬಹಳ ಕಾಲದಿಂದ ಅವರು ಕಾಶೀ ಅದ್ವೈತ ಆಶ್ರಮದಲ್ಲಿ ವಾಸಿಸುತ್ತಿದ್ದರು. ಇವರು ೧೯೦೮ರಲ್ಲಿ ಮಠವನ್ನು ಸೇರಿದ್ದು, ೧೯೧೧ರಲ್ಲಿ ಸಂನ್ಯಾಸ ಪಡೆದಿದ್ದರು. ಮಹಿಮಾನಂದರು ಶ್ರೀರಾಮಕೃಷ್ಣ ಮಠ ಮತ್ತು ಮಿಷನ್ನಿನ ವಿಶ್ವಸ್ತರೂ ಮತ್ತು ಆಡಳಿತ ಮಂಡಲಿಯ ಸದಸ್ಯರೂ ಆಗಿದ್ದರು.

ಕಳೆದ ಚಳಿಗಾಲದಲ್ಲಿ ಶ್ಯಾಮಲಾತಾಲ್‌ನ ಆಶ್ರಮದ ಕಟ್ಟಡವು ಅನೇಕ ಪರಿವರ್ತನೆಗಳಿಗೆ ಒಳಗಾಗಿತ್ತು. ಹೊಸ ದೇವರ ಮನೆಯನ್ನು ನಿರ್ಮಿಸಲಾಗಿತ್ತು. ಈಗ ಸ್ನಾನಯಾತ್ರೆಯ ದಿನ ಅಲ್ಲಿ ಠಾಕೂರ್ ಮಾ ಸ್ವಾಮೀಜಿಯವರ ಭಾವಚಿತ್ರಗಳನ್ನು ಪ್ರತಿಷ್ಠಾಪನೆ ಮಾಡಲಾಯಿತು. ಈ ಮಧ್ಯೆ ನಡೆದ ಒಂದು ಅನಿರೀಕ್ಷಿತ ಘಟನೆಯಿಂದಾಗಿ ಮಹಾರಾಜರು ಕೆಲವು ದಿನ ತೊಡಕಿನಲ್ಲಿ ಸಿಲುಕಿ ತುಂಬ ಉದ್ವಿಗ್ನರಾಗಿದ್ದರು. ಅದೇನೆಂದರೆ, ಇಲ್ಲಿ ಡಾ. ಸ್ವಾಮಿ ಎಂದೇ ಪರಿಚಿತರಾದ ಲೋಕೇಶಾನಂದರು ಸಂಜೆಯಲ್ಲಿ ಒಬ್ಬರೇ ಅಡ್ಡಾಡುತ್ತಿದ್ದಾಗ ಅಕಸ್ಮಾತ್ತಾಗಿ ಅಸ್ತವ್ಯಸ್ತ ವೇಷದ ಯುವತಿಯೊಬ್ಬಳು ಕೆಳಗಿನ ರಸ್ತೆಯಿಂದ ಹತ್ತಿ, ಇವರ ಬಳಿ ಬಂದು ಬಂಗಾಳಿಯಲ್ಲಿ , ''ಇದೇ ಏನು ಬಾಬಾರ ಆಶ್ರಮ?'' ಎಂದು ಕೇಳಿದಳು.

ಡಾ. ಸ್ವಾಮಿಗಳು ಒಳ್ಳೆಯ ಕಟ್ಟುಮಸ್ತಿನ ಆಸಾಮಿಯಾಗಿದ್ದರು [೨], ಈ ಪರ್ವತ ಪ್ರದೇಶದಲ್ಲಿ ಎಂಟು ವರ್ಷಗಳನ್ನು ಕಳೆದಿದ್ದರೂ ಸಹ ಎಲ್ಲ ರೀತಿಯ ಭಯಗಳೂ (ಹುಲಿ, ಕರಡಿ, ಜಿಗಣೆ, ಭೂತಪ್ರೇತ ಇವುಗಳ ಭಯ) ಅವರ ಸುಪ್ತ ಮನಸ್ಸಿನಲ್ಲಿ ಜಾಗರೂಕವಾಗಿದ್ದವು. ಕತ್ತಲಾಗುತ್ತಿದ್ದಂತೆಯೇ ಕ್ರೂರ ಮೃಗಗಳಿಂದ ಕೂಡಿದ, ಅರಣ್ಯಗಳಿಂದ ಸುತ್ತುವರಿದ ಈ ಪರ್ವತ ಮಾರ್ಗದಲ್ಲಿ ಪಹಾಡಿಗಳೂ ಸಹ ಮನೆಯಿಂದ ಹೊರಬೀಳಲಾರರು, ಅಂತಹದರಲ್ಲಿ ಏಕಾಕಿನಿಯಾದ ಈ ವಂಗಲಲನೆಯ ಆವಿರ್ಭಾವ! ಡಾಕ್ಟರ್ ಸ್ವಾಮಿಗಳು ನಿಬ್ಬೆರಗಾದರು. ಅವರು ತಮ್ಮ ಕಣ್ಣನ್ನು ತಾವೇ ನಂಬಲಾರದೆ ಹೋದರು. ಆದರೂ ಉಳಿದಿದ್ದ ಧೈರ್ಯವನ್ನೆಲ್ಲ ಒಟ್ಟುಗೂಡಿಸಿ ಒಡೆದ ಕಂಠದಿಂದ ಕೇಳಿದರು ''ಯಾವ ಬಾಬಾ?''

''ಅರೆ, ಯಾವ ಬಾಬಾ ಎಂದರೇನು? ಬಾಬಾ– ಗುರುದೇವ — ವಿರಜಾನಂದ ಮಹಾರಾಜ್'' ಎಂದು ಹೂಂಕರಿಸಿದಳು ಆ ಯುವತಿ.

ಡಾ. ಸ್ವಾಮಿಗಳು ಮಹಾರಾಜರು ಇರುವ ಕಟ್ಟಡದ ಕಡೆಗೆ ಓಡತೊಡಗಿದರು. ಆ ಗಡಿಬಿಡಿಯಲ್ಲಿ ಅವರ ಕೈಯಲ್ಲಿದ್ದ ಸಣ್ಣದಾಗಿ ಉರಿಯುತ್ತಿದ್ದ, ಕತ್ತಲೆಯಲ್ಲಿ ಏಕಮಾತ್ರ ಆಧಾರವಾಗಿದ್ದ ಲಾಟೀನಿನ ದೀಪವೂ ನಂದಿಹೋಯಿತು. ಮಹಾರಾಜರ ಸೇವಕರು ಘಟನಾಸ್ಥಳಕ್ಕೆ ಧಾವಿಸಿ ಬಂದರು. ಆ ಯುವತಿಯ ಗುರುತು

೧ ಕೆಲವು ವರ್ಷಗಳ ನಂತರ ಈತನ ಎರಡನೇ ಮಗನೂ ಹಿರಿಯಣ್ಣನ ಹಾದಿ ಹಿಡಿದು, ವೈರಾಗ್ಯ ಪಥವನ್ನವಲಂಬಿಸಿ ಬೇಲೂರು ಮಠವನ್ನು ಸೇರಿದನು.

೨ ಇವರ ಮನೆಯಲ್ಲಿ ಕರೆಯುತ್ತಿದ್ದ ಹೆಸರು 'ಶ್ರೀಶ' ಎಂದು. ಕಾಶೀ ಸೇವಾಶ್ರಮದಲ್ಲಿದ್ದಾಗ ಪೂಜ್ಯ ಸ್ವಾಮಿ ಬ್ರಹ್ಮಾನಂದರು ಇವರಿಗೆ 'ಲಟಪಟ ಜವಾನ್' ಎಂದು ಹೆಸರಿಟ್ಟಿದ್ದರು. ಬ್ರಹ್ಮಚರ್ಯ ದೀಕ್ಷೆಯಾದಾಗ ಇವರಿಗೆ 'ಮಹಾವೀರ ಚೈತನ್ಯ' ಎಂದು ಹೆಸರಾಯಿತು.

ವಯಸ್ಸು ೨೫ ದಾಟಿದೆ, ಮದುವೆಯಾಗಿಲ್ಲ. ಮಹಾರಾಜರು ಬೇಲೂರು ಮಠದಲ್ಲಿದ್ದಾಗ ಯಾವಾಗಂದರಾವಾಗ ಬಂದು ದೊಡ್ಡ ಗೊಂದಲವನ್ನೇ ಎಬ್ಬಿಸಿಬಿಡುತ್ತಿದ್ದಳು. ಈ ಬಾರಿ ಮಹಾರಾಜರು ಶ್ಯಾಮಲಾತಾಲ್‌ಗೆ ಬರುವ ಮುನ್ನ ಹಠ ಹಿಡಿದಿದ್ದಳು. ''ಬಾಬಾ (ತಂದೆ), ನಾನೂ ನಿನ್ನೊಡನೆ ಶ್ಯಾಮಲಾತಾಲ್‌ಗೆ ಬರುವೆ'' ಎಂದು. ಮಹಾರಾಜರು ಗದರಿಸಿ, ''ಆ ಮಾತೆತ್ತಬೇಡ, ಹುಷಾರ್'' ಎಂದಿದ್ದರು.

ಅದೇ ಹುಡುಗಿ! ತನ್ನ ಸಂಬಂಧಿಗಳ ಮಾತನ್ನೂ ಕೇಳದೆ, ದಾರಿಯಲ್ಲಿಯ ಅಪಾಯಗಳನ್ನೂ ಲೆಕ್ಕಿಸದೆ ಒಬ್ಬಳೇ ಇಷ್ಟು ದೂರ ಬಂದುಬಿಟ್ಟಿದ್ದಾಳೆ. ಅವಳು ಮಹಾರಾಜರಿಗೆ ಪ್ರಣಾಮ ಮಾಡಿ ಏಳುತ್ತಲೇ, ವಿರಜಾನಂದರು ತುಂಬ ಗಂಭೀರ ಮತ್ತು ರೋಸಿಹೋದ ಕಂಠದಿಂದ ಹೇಳುತ್ತಿದ್ದಾರೆ, ''ಕಿರುಕುಳ ಕೊಡಲು ಇಲ್ಲಿಗೂ ಬಂದಿರುವೆಯಾ?'' ಹುಡುಗಿ ಭಯಬೀಳಲಿಲ್ಲ; ನಗುತ್ತಿದ್ದಾಳೆ. ಮಹಾರಾಜರು ಇಷ್ಟು ಗಂಭೀರವಾಗಿರುವುದನ್ನು ಎಂದೂ ಕಂಡಿಲ್ಲವಲ್ಲ! ಇಷ್ಟು ಗಾಂಭೀರ್ಯ ತಾಳಲು ಸಾಧ್ಯವೇ ಇವರಿಗೆ? ಖಂಡಿತ ಇದು ನಟನೆಯೇ, ಪರವಾಗಿಲ್ಲವಲ್ಲ! ತುಂಬ ಮಜವಾಗಿ ಕಾಣುತ್ತಿದೆ! ಹೇಳುತ್ತಿದ್ದಾಳೆ, ''ಬಾಬಾ ನನ್ನನ್ನು ಇನ್ನೂ ಎಷ್ಟು ಪರೀಕ್ಷಿಸುವೆ?''

ಇಲ್ಲ , ಇನ್ನು ಪರೀಕ್ಷಿಸುವುದಿಲ್ಲ. ಈ ಹುಡುಗಿಯ ಎಲ್ಲ ಅಸ್ವಾಭಾವಿಕ ನಡೆವಳಿಕೆಗಳ ನಡುವೆಯೂ ಅವಳ ಶುದ್ಧ ಭಕ್ತಿಯನ್ನು ಮಹಾರಾಜರು ಕಂಡುಕೊಂಡಿದ್ದಾರೆ. ಮಹಾರಾಜರು ಕರಗಿ ಪಿತೃವಾತ್ಸಲ್ಯದಿಂದ ಹುಡುಗಿಯ ತಲೆ ನೇವರಿಸತೊಡಗಿದ್ದಾರೆ.

ಮಹಾರಾಜರ ಬಂಗಲೆಯ ಹತ್ತಿರದಲ್ಲೇ ಒಂದು ಹಳೆಯ ಚಿಕ್ಕ ಮುರುಕಲು ಮನೆಯಿತ್ತು. ಅದನ್ನು ನಾನಾ ವಸ್ತುಗಳನ್ನಿಡುವ ಗೋದಾಮನ್ನಾಗಿ ಉಪಯೋಗಿಸುತ್ತಿದ್ದರು. ಆ ರಾತ್ರಿಯಲ್ಲೇ ಆಶ್ರಮದ ಪರಿಚಾಲಕರಾದ ಅಪೂರ್ವಾನಂದರು ಕೆಲಸದವರನ್ನು ಕರೆದುಕೊಂಡು ಅದನ್ನು ಚೊಕ್ಕಟಗೊಳಿಸಿದರು. ಮಹಾರಾಜರಿಗೋಸ್ಕರ ಎಂತಹ ಪರಿಶ್ರಮವನ್ನೂ ಸಹ ಅವರು ಕಷ್ಟವೆಂದು ಪರಿಗಣಿಸುತ್ತಿರಲಿಲ್ಲ. ಹುಡುಗಿಯು ಕೆಲವೊಂದು ದಿನ ಅಲ್ಲಿಯೇ ಉಳಿದುಕೊಂಡಳು. ಅವಳ ಅಣ್ಣನಿಗೆ ಟೆಲಿಗ್ರಾಂ ಮಾಡಿ ತಿಳಿಸಲಾಯಿತು. ಅಣ್ಣನು ಅವಳನ್ನು ಕರೆದುಕೊಂಡು ಹೋದಾಗ ಮಹಾರಾಜರು ನಿಶ್ಚಿಂತರಾದರು. ''ನಿರ್ಜನ ವಾತಾವರಣದಲ್ಲಿ ಇರೋಣವೆಂದು ನಾನಿಲ್ಲಿಗೆ ಬರುವುದು, ಆದರೆ ಇಲ್ಲಿಯೂ ನೋಡು ಇವರುಗಳು ಬಿಡುವುದಿಲ್ಲ'' ಎಂದಿದ್ದರು ಮಹಾರಾಜರು. ಅದು ಹಾಗೆಯೇ ಆಯಿತು.

ಇಲ್ಲಿಯೂ ಬಿಡರು. ಶೀಘ್ರವೇ ದೆಹಲಿಯಿಂದ ಭಕ್ತರ ಗುಂಪೊಂದು ಬಂದು ಹಾಜರಾಯಿತು. ನಂತರ ಪಂಜಾಬಿನ ಲೂಧಿಯಾನಾದಿಂದ. ಅನಂತರ ಕಲ್ಕತ್ತೆಯಿಂದ ಮೇಜರ್ ಡೇವಿ (Davy) ಎಂಬ ಇಂಗ್ಲಿಷ್ ಮಿಲಿಟರಿ ಡಾಕ್ಟರೊಬ್ಬರು ಆಲ್ಮೋರದಲ್ಲಿದ್ದಾಗ ಶ್ರೀರಾಮಕೃಷ್ಣ-ವಿವೇಕಾನಂದರ ಬಗ್ಗೆ ತಿಳಿದರು. ಅವರೂ ಸಹ ಒಂದು ದಿನ ಶ್ಯಾಮಲಾತಾಲ್‌ಗೆ ಬಂದರು. ಉದ್ದೇಶ, ವಿವೇಕಾನಂದರಿಂದ ಸ್ಥಾಪಿಸಲ್ಪಟ್ಟ ಸಂಘದ ಈಗಿನ ಅಧ್ಯಕ್ಷರನ್ನು ಕಂಡು, ಅವರಿಂದ ಆಧ್ಯಾತ್ಮಿಕ ಸಾಧನೆಗೆ ಸಲಹೆಗಳನ್ನು ಪಡೆಯುವುದು. ಇವರು ನಾಲ್ಕು ದಿನಗಳಿದ್ದು ತುಂಬ ಸಂತೋಷ ತೃಪ್ತಿಗಳಿಂದ ಹಿಂತಿರುಗಿದರು.

ಒಂದು ದಿನ ಮಧ್ಯಾಹ್ನ, ಉತ್ತರ ಪ್ರದೇಶದ ಅರಣ್ಯಾಧಿಕಾರಿಗಳೊಬ್ಬರನ್ನು ಕರೆದುಕೊಂಡು ಇದ್ದಕ್ಕಿದ್ದಂತೆ ಸ್ವಾಮಿ ಅನಂತಾನಂದರು (ಕಾನ್ಹಾಯ್) ಹಾಜರಾದರು. ಆ ಅಧಿಕಾರಿಗಳು ಮಠದ ಹಳೆಯ ಭಕ್ತರು. ಒಂದೂವರೆ ದಿನಗಳಿದ್ದು ಮಹಾರಾಜರ ಬಳಿ ಕುಳಿತು ಅವರ ಪೂರ್ವ ಬಂಗಾಳದ ಪ್ರಯಾಣದ ವಿಷಯಗಳನ್ನು ಆಮೂಲಾಗ್ರ ಕೇಳಿಕೊಂಡರು. ವಿಶಾಲ ಭರತಭೂಮಿಯಲ್ಲಿ ಎಲ್ಲಿದ್ದರೆ ತಾನೆ ಏನಂತೆ? ಕಾನ್ಹಾಯ್ ಅಂತೂ ಮಹಾರಾಜರನ್ನು ವರ್ಷಕ್ಕೊಮ್ಮೆಯಾದರೂ ನೋಡಲೇಬೇಕು!

ಮಹಾರಾಜರ ಆರೋಗ್ಯ ಕ್ರಮೇಣ ಹದಗೆಡುತ್ತಲೇ ಹೋಯಿತು. ಜುಲೈ ತಿಂಗಳಲ್ಲಿ ಅದು ಆತಂಕ ತರುವ ಸ್ಥಿತಿಯನ್ನು ತಲುಪಿತು. ಕಲ್ಕತ್ತೆಯಿಂದ ವೈದ್ಯರು ಮತ್ತೆ ಮತ್ತೆ ಮಹಾರಾಜರಿಗೆ ಪತ್ರ ಬರೆದು, ''ನಿಮ್ಮ ಆರೋಗ್ಯದ ಈಗಿನ ಪರಿಸ್ಥಿತಿಯಲ್ಲಿ ಪರ್ವತ ಪ್ರದೇಶದಲ್ಲಿರುವುದು ಉಚಿತವಲ್ಲ, ತಡಮಾಡದೆ ಡೆಹರಾಡೂನಿಗೆ ಹೊರಡಿ'' ಎಂದು ಕೇಳಿಕೊಂಡಿದ್ದರು.

ಜುಲೈ ೧೪ರಂದು (೧೯೪೫) ರಾತ್ರಿ ಹತ್ತಕ್ಕೆ ಬರೇಲಿ ಜಂಕ್ಷನ್ನಿನ ಪ್ಲಾಟ್‌ಫಾರ್ಮ್‌ನಲ್ಲಿ ಡೂನ್ ಎಕ್ಸ್‌ಪ್ರೆಸ್‌ಗಾಗಿ ಕಾಯುತ್ತ ಕುಳಿತಿದ್ದಾರೆ. ಸೇವಕ ಮಹಾರಾಜರು ಹೆದರಿ ಸಂಕೋಚದಿಂದಲೇ ಮಹಾರಾಜರಿಗೆ ಒಂದು ಭಯಂಕರ ಸುದ್ದಿ ನೀಡಿದರು 'ಮಠದಿಂದ ಭರತ್ ಮಹಾರಾಜರು ಎರಡನೇ ದರ್ಜೆಯ ಇಡೀ ಬೋಗಿಯನ್ನೇ ನಿಮಗಾಗಿ ರಿಸರ್ವ್ ಮಾಡಿದ್ದಾರೆ. ಲಕ್ನೌನಲ್ಲಿ ಈ ಬೋಗಿಯನ್ನು ರೈಲಿಗೆ ಸೇರಿಸಲಾಗಿದೆ' ಎಂದು.

'ಇಡೀ ಬೋಗಿಯನ್ನೇ ಏಕೆ?'

'ಈ ಅಸ್ವಸ್ಥ ಸ್ಥಿತಿಯಲ್ಲಿ ನಿಮಗೆ ಹೆಚ್ಚಿನ ಆರಾಮ ಸಿಗಲೆಂದು!'

ಮಠಾಧ್ಯಕ್ಷರಾಗುವವರೆಗೂ ವಿರಜಾನಂದರು ಮೂರನೇ ಶ್ರೇಣಿಯಲ್ಲಿ , ಹೆಚ್ಚೆಂದರೆ ಎರಡನೇ ಶ್ರೇಣಿಯಲ್ಲಿಯೇ ಪಯಣಿಸುತ್ತ ಬಂದಿದ್ದರು. ಮಠಾಧ್ಯಕ್ಷರಾದ ನಂತರ ಈಗೀಗ ಎರಡನೇ ಶ್ರೇಣಿಯ ಕೆಳಗಿನ ಬೆಂಚನ್ನು ರಿಸರ್ವ್ ಮಾಡಿಕೊಂಡೇ ಓಡಾಡುತ್ತಾರೆ. ಐದು ಬರ್ತ್‌ಗಳಿರುವ ಇಡೀ ಬೋಗಿಯನ್ನೇ ರಿಸರ್ವ್ ಮಾಡಿರುವುದು ಒಂದು ಭಯಂಕರ ಸುದ್ದಿಯಲ್ಲದೆ ಮತ್ತಿನ್ನೇನು?

''ನೀವುಗಳು ಅದೇನು ಒಳಗೊಳಗೇ ಪರ್ಯಾಲೋಚಿಸುತ್ತೀರೋ ಏನೋ, ನನಗಂತೂ ಒಂದನ್ನೂ ಹೇಳುವುದಿಲ್ಲ. ತುಂಬ ಅನ್ಯಾಯ'' ಎಂದರು.

ಆದರೆ ಡೆಹರಾಡೂನನ್ನು ತಲುಪಿದಾಗ ಮಹಾರಾಜರಿಗೆ ಈ ವ್ಯವಸ್ಥೆಯು ಅನ್ಯಾಯವಾದದ್ದೇನೂ ಅಲ್ಲ ಎಂದೆನಿಸಿತು. ಏಕೆಂದರೆ, ಪ್ರಯಾಣವು ಎಷ್ಟು ನಿರಾಯಾಸವಾಗಿತ್ತೆಂದರೆ, ಮಹಾರಾಜರಿಗೆ ತಮ್ಮ ಕೊಠಡಿಯಲ್ಲಿಯೇ ಮಲಗಿ, ಕುಳಿತು ಹಾಯಾಗಿ ಇದ್ದಂತೆ ಇತ್ತು. ಇದಾದ ನಂತರ ಮುಂದಿನ ಕೆಲವು ವರ್ಷಗಳಲ್ಲಿ ಇಡೀ ಬೋಗಿಯನ್ನು ರಿಸರ್ವ್ ಮಾಡುವ ವ್ಯವಸ್ಥೆಯನ್ನು ಕಂಡು ಇವರು ಮೂಗು ಮುರಿಯುತ್ತಿರಲಿಲ್ಲ. ಪ್ಯಾಕಿಂಗ್ ಬಾಕ್ಸ್, ಟ್ರಂಕ್ ಮುಂತಾದವುಗಳನ್ನು ರೈಲಿನ ಬೆಂಚಿಗೆ ಹೊಂದಿಸಿಟ್ಟು ಅದನ್ನು ಒಂದು ಮಂಚವನ್ನಾಗಿ ಪರಿವರ್ತಿಸುತ್ತಿದ್ದರು ಸೇವಕರು. ರೈಲಿನಲ್ಲೇ ಸ್ಟೌವ್ ಉರಿಸಿ, ಕುಕ್ಕರಿನಲ್ಲಿ ಮಹಾರಾಜರಿಗಾಗಿ ಅಡಿಗೆಯನ್ನೂ ಮಾಡುತ್ತಿದ್ದರು. ನಿತ್ಯದ ಗುಡುಗುಡಿಯೂ ಸಹ ತಪ್ಪುತ್ತಿರಲಿಲ್ಲ ಮಹಾರಾಜರಿಗೆ. ದಾರಿಯಲ್ಲಿನ ನಾನಾ ನಿಲ್ದಾಣಗಳಲ್ಲಿ ಬಂದು ಸೇರುತ್ತಿದ್ದ ದರ್ಶನಾರ್ಥಿಗಳ ಗುಂಪಿಗಾಗಲಿ, ಅವರು ತರುತ್ತಿದ್ದ ಹೂಮಾಲೆ ತಿಂಡಿ-ತೀರ್ಥಗಳ ರಾಶಿಯಿಂದ ಸಹ ಪ್ರಯಾಣಿಕರಿಗೆ ಅನಾನುಕೂಲವಾಗುತ್ತಿದೆ ಎಂದು ಭಾವಿಸಿಯಾಗಲಿ ಮಹಾರಾಜರು ಸಂಕೋಚಪಡಬೇಕಾಗಿ ಬರುತ್ತಿರಲಿಲ್ಲ.

ಡೆಹರಾಡೂನಿನಲ್ಲಿ ಪ್ರಾರಂಭದ ಒಂದೂವರೆ ತಿಂಗಳು ಮಹಾರಾಜರ ಹದಗೆಟ್ಟ ಆರೋಗ್ಯವು ಚೇತರಿಸಿಕೊಳ್ಳುವ ಲಕ್ಷಣವೇನೂ ಕಾಣಲಿಲ್ಲ. ಆತಿಥೇಯರಾದ ಕ್ಯಾಪ್ಟನ್ ಮಿತ್ರರು ತುಂಬ ಚಿಂತೆಗೊಳಗಾದರು. ''ಮಹಾರಾಜ್ ನಿಮ್ಮ ಪೂರ್ವವಂಗದ ಪ್ರಯಾಣದಿಂದಲೇ ಆದ ಪ್ರತಿಕ್ರಿಯೆ ಇದು. ನಿಮಗಿದು ತಿಳಿಯುತ್ತಿದೆ ತಾನೆ? ನಾನೆಷ್ಟು ಬೇಡವೆಂದರೂ ನೀವು ಕೇಳಲೇ ಇಲ್ಲ'' ಎಂಬುದು ಅವರ ಆಕ್ಷೇಪಣೆ. ಮಹಾರಾಜರು ಮಾತನಾಡದೆ ಸುಮ್ಮನಿದ್ದಾರೆ. ಇಷ್ಟರಲ್ಲಿ ಮುಂಬಯಿಯಿಂದ ಪುನಃ ಕರೆ ಬಂದಿದೆ; ಕರಾಚಿ ಮತ್ತು ದಕ್ಷಿಣ ಭಾರತದಿಂದಲೂ ಸಹ. 'ಶರೀರವು ಸ್ವಲ್ಪ ಸುಧಾರಿಸಿದರೂ ಸರಿ, ನಾನು ಖಂಡಿತವಾಗಿಯೂ ಹೋಗುತ್ತೇನೆ' ಎಂದುಕೊಳ್ಳುತ್ತಿದ್ದಾರೆ ಮಹಾರಾಜರು.

ಇತ್ತ, ಶ್ಯಾಮಲಾತಾಲ್‌ಗೆ ಏಕಾಂಗಿನಿಯಾಗಿ ಹೊರಟು, ೧೩ ಮೈಲಿಗಳ ಕಾಡುಮೇಡಿನ ಪರ್ವತ ದಾರಿಯನ್ನು ತುಳಿದು ರಾತ್ರಿಯ ಅಂಧಕಾರದಲ್ಲಿ ಬಂದು ತಲುಪಿದ ದುಸ್ಸಾಹಸಿಯಾದ ಆ ಹುಡುಗಿಗೆ, ರೈಲಿನಲ್ಲಿ ಹತ್ತಿ ಸೀದಾ ಡೆಹರಾಡೂನಿಗೆ ಬಂದು ಹರಕು ಮುರುಕು ಹಿಂದಿಯಲ್ಲಿ 'ಮಿತ್ರ ಸಾಹೇಬ್ ಕಾ ಕೋಠಿ!' ಎಂದು ಕೇಳಿಕೊಂಡು ಹುಡುಕುತ್ತ ಮಹಾರಾಜರಿದ್ದ 'ಶ್ರೀರಂಗಂ'ಗೆ ಬರುವುದು ಕಷ್ಟದ ಕೆಲಸವೇನಾಗಿರಲಿಲ್ಲ. ಹಾಗೇ ಆಯಿತು, ಒಂದು ದಿನ ಬೆಳಗ್ಗೆ ಪಿತೃ ಸ್ನೇಹಾಕಾಂಕ್ಷಿಣಿಯಾದ ಈ ಹುಡುಗಿ 'ಶ್ರೀರಂಗಂ'ನಲ್ಲಿ ಪ್ರತ್ಯಕ್ಷವಾದಾಗ ಮಹಾರಾಜರು ವಿಸ್ಮಿತರಾಗುವ ಬದಲು ನಿಷ್ಠುರರಾದರು. ''ಬಂದಿದ್ದಾಗಿದೆ ಸರಿ, ನೋಡಿದ್ದಾಯಿತಲ್ಲ, ಈಗಲೇ ಹೊರಟುಬಿಡು, ಈ ಕ್ಷಣವೇ'' ಎಂದರು. ಆತಿಥೇಯರಾದ ಡಾಕ್ಟರರು ಮಧ್ಯಸ್ಥಿಕೆ ವಹಿಸಿ ''ಈ ಕ್ಷಣವೇ ಬೇಡ, ಇನ್ನೂ ಹನ್ನೊಂದು ಗಂಟೆಗಳ ನಂತರ ಕೊಲ್ಕತ್ತೆಗೆ ಹೋಗುವ ಡೂನ್ ಎಕ್ಸ್‌ಪ್ರೆಸ್ ಬರುವವರೆಗೆ'' ಎಂದರು. ಕೊನೆಗೆ ಅವರೇ ಈ ಹುಡುಗಿಯ ಟಿಕೇಟ್ ತೆಗೆಸಿಕೊಟ್ಟು ರೈಲಿನಲ್ಲಿ ಕೂರಿಸಿ ಬಂದರು.

ಅಮೆರಿಕಾದ ಅಣುಬಾಂಬಿನ ಆಕ್ರಮಣದಿಂದಾಗಿ ಜಪಾನ್ ಶರಣಾಗಿದೆ. ಈಗ ಯುದ್ಧವು ಹೊಸ ತಿರುವನ್ನು ಪಡೆಯಬಹುದು, ಆದರೆ ಶಾಂತಿಗೋಸ್ಕರ ತೆತ್ತ ನಿಷ್ಠುರವಾದ ಮೌಲ್ಯವಾದರೂ ಏನು? ಹಿರೋಶಿಮಾದಲ್ಲಿ ನಡೆದ ವಿಧ್ವಂಸದ ಬಗ್ಗೆ ವಿರಜಾನಂದರು ರೇಡಿಯೋವಿನಿಂದ, ವೃತ್ತಪತ್ರಿಕೆಗಳಿಂದ ತಿಳಿದುಕೊಳ್ಳುತ್ತಿದ್ದರು.

ಮಹಾರಾಜರ ಆರೋಗ್ಯ ಕ್ರಮೇಣ ಉತ್ತಮಗೊಳ್ಳಲಾರಂಭಿಸಿತು. 'ಶ್ರೀರಂಗಂ'ನಲ್ಲಿ ಕೃಷ್ಣಜನ್ಮಾಷ್ಟಮಿಯನ್ನು ಸಹ ಆಚರಿಸಿದರು. ಹಿಂದಿನ ಸ್ಮೃತಿಗಳನ್ನು ಎಲ್ಲರೊಡನೆ ಕೆಲವುದಿನ ಹಂಚಿಕೊಂಡರು. ತಿರುವಾಂಕೂರಿನ ಭಕ್ತರೊಬ್ಬರು ತಮ್ಮ ಪತ್ನಿಯೊಡನೆ ವಿರಜಾನಂದರಿಂದ ದೀಕ್ಷೆ ಪಡೆಯಬೇಕೆಂದು ಬಯಸಿ, ಹರಿದ್ವಾರದಲ್ಲಿ ಕೆಲಕಾಲದಿಂದ ಕಾಯುತ್ತಿದ್ದರು; ಡೆಹರಾಡೂನಿನಲ್ಲಿ ಅವರ ಆಕಾಂಕ್ಷೆ ಈಡೇರಿತು. ಹಾಗೆಯೇ ಕರಾಚಿ ಆಶ್ರಮದಿಂದ ಬಂದಿದ್ದ ಇಬ್ಬರು ಬ್ರಹ್ಮಚಾರಿಗಳಿಗೆ ದೀಕ್ಷೆಯನ್ನೂ ಸಹ ಇತ್ತರು.

ಮುಸ್ಸೌರಿ ಪರ್ವತದ ಬಾರ್ಲೋಗಂಜಿನಲ್ಲಿ 'ಶ್ರೀ ಶಾರದಾ ಕುಟೀರ್' ಎಂಬ ಹೆಸರಿನ ಆಶ್ರಮವೊಂದನ್ನು ಹಿಂದಿನ ವರ್ಷ ಸ್ಥಾಪಿಸಲಾಗಿತ್ತು (೧೯೪೪). ಸ್ವಾಮಿ ಅತುಲಾನಂದರು (ಗುರುದಾಸ್ ಮಹಾರಾಜ್) ಚಳಿಗಾಲದ ಸಮಯ ಬಿಟ್ಟು ಬಾಕಿ ಸಮಯದಲ್ಲಿ ಅಲ್ಲಿಯೇ ಇರುತ್ತಿದ್ದರು. ಅಲ್ಲದೆ ಏಕಾಂತದಲ್ಲಿದ್ದು ಜಪ-ಧ್ಯಾನ ಮಾಡಲಿಚ್ಛಿಸುವ ಸಂನ್ಯಾಸಿಗಳೂ ಸಹ ಈ ಆಶ್ರಮದಲ್ಲಿ ಕೆಲಕಾಲವಿದ್ದು ಹೋಗುತ್ತಿದ್ದರು. ಈ ಬಾರಿ ವಿರಜಾ ನಂದರು ಈ ಆಶ್ರಮವನ್ನು ನೋಡಿ ಬರುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅಕ್ಟೋಬರ್ ೧೦ ರಂದು (೧೯೪೫) ಅಲ್ಲೊಂದು ಸಣ್ಣ ಉತ್ಸವದ ಆಯೋಜನೆಯೇ ನಡೆ ಯಿತು. ವಿರಜಾನಂದರು ಮತ್ತು ಅತುಲಾನಂದರು ಎದುರು ಬದರು ಕುರ್ಚಿಗಳಲ್ಲಿ ಕುಳಿತು ಬಹಳ ಹೊತ್ತು ಮಾತನಾಡಿದರು. ಆಗ ಪ್ರೇಮೇಶಾನಂದರೂ ಸಹ ಅಲ್ಲಿದ್ದರು. ಆನಂದದ ಸಂತೆಯೇ ಅಲ್ಲಿ ನೆರೆದಿತ್ತು. ಆಶ್ರಮದ ಪಕ್ಕದಲ್ಲಿಯೇ ಮನೆ ಮಾಡಿಕೊಂಡಿದ್ದ ಪ್ರಖ್ಯಾತ ವಿಜ್ಞಾನಿ ಡಾಕ್ಟರ್ ನೀಲರತನ್ ಧರ್ ಸಹ ಈ ಆನಂದದಲ್ಲಿ ಪಾಲ್ಗೊಂಡಿದ್ದರು. ವಿರಜಾನಂದರು ಅಂದೇ ಸಂಜೆ ಡೆಹರಾಡೂನಿಗೆ ಹಿಂದಿರುಗಿದರು.